**Com.O.S**. 60/2022

**DW**-1

**ಸಾಕ್ಷಿಯನ್ನು ದಿನಾಂಕ 17.6.2026 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ಪಿ.ಕೆ ವಕೀಲರಿಂದಃ**

ನಾನು ಪ್ರತಿವಾದಿ ಆಸ್ಪತ್ರೆಯಲ್ಲಿ ಒಬ್ಬ ಟ್ರಸ್ಟಿ ಇರುತ್ತೇನೆ. ಸದರಿ ಟ್ರಸ್ಟ್ ಖಾಸಗಿ ಟ್ರಸ್ಟ್ ಇರುತ್ತದೆ. ಪ್ರಕರಣವನ್ನು ನಡೆಸಲು ನನಗೆ ಪ್ರತಿವಾದಿಯ ಆಸ್ಪತ್ರೆಯಿಂದ ಅಧಿಕಾರ ಪತ್ರ ಇದೆ. ಸದರಿ ಅಧಿಕಾರಪತ್ರವನ್ನು ನ್ಯಾಯಾಲಯಕ್ಕೆ ನೀಡಿದ್ದೇನೆ. ಅಧಿಕಾರ ಪತ್ರವನ್ನು ಹಾಜರುಪಡಿಸದಿದ್ದಲ್ಲಿ, ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಪ್ರಕರಣ ನಡೆಸಲು ಪ್ರತಿವಾದಿ ಆಸ್ಪತ್ರೆ ನನಗೆ ಅಧಿಕಾರ ಪತ್ರ ನೀಡಿಲ್ಲ ಎಂದರೆ ಸರಿಯಲ್ಲ.

ನಿಪಿ8 ವಾದಿ ಮತ್ತು ಪ್ರತಿವಾದಿ ಸಂಸ್ಥೆಯ ಮಧ್ಯೆ ಆದಂತಹ ಒಪ್ಪಂದದ ಪತ್ರ ಇರುತ್ತದೆ. ನಿಪಿ8 ರ ಷರತ್ತುಗಳನ್ನು ಮತ್ತು ಖಂಡಿಕೆಗಳನ್ನು ಓದಿ ಅರ್ಥೈಸಿಕೊಂಡಿರುತ್ತೇನೆ. ನಿಪಿ8 ಕ್ಕೆ ನಾನು ಕೂಡ ಪಕ್ಷಗಾರ ಇದ್ದು ಸಹಿ ಮಾಡಿರುತ್ತೇನೆ. ನಿಪಿ8 ದೇಶದಲ್ಲಿ ಕೋವಿಡ್-19 ಸಾಂಕ್ರಾಮಿಕ ಖಾಯಿಲೆ ವೃದಿಸಿದ್ದ ಸಮಯದಲ್ಲಿ ಜಾರಿಯಾದ ದಾಖಲೆ. ಕೋವಿಡ್-19 ಸಾಂಕ್ರಾಮಿಕ ಖಾಯಿಲೆ ಇದುದ್ದರಿಂದ ಆಸ್ಪತ್ರೆಗೆ ಹೆಚ್ಚಿನ ಸ್ಥಳ ಬೇಕಾಗಿದ್ದರಿಂದ ನಿಪಿ8 ನ್ನು ಜಾರಿ ಮಾಡಿಕೊಂಡಿದ್ದೆವು. ನಿಪಿ8 ರ ಪ್ರಕಾರ ವಾದಿಯು ಪ್ರತಿವಾದಿ ಸಂಸ್ಥೆಗೆ ರೂ. 20 ಲಕ್ಷವನ್ನು ಮುಂಗಡ ಭದ್ರತಾ ಠೇವಣಿ (ರಿಫಂಡೆಬಲ್ ಸೆಕ್ಯೂರಿಟಿ ಡೆಪಾಸಿಟ) ಎಂದು ನೀಡಿದ್ದರು ಎಂದರೆ ನಿಜ. ಆರಂಭದಲ್ಲಿ 11 ತಿಂಗಳ ಅವಧಿಗೆ ನಿಪಿ8

ಮಾಡಿಕೊಂಡಿದ್ದೆವು. ನಿಪಿ8 ಜಾರಿಯಾದ ನಂತರ ಕೋವಿಡ್–19 ಪ್ರಕರಣಗಳ ಸಂಖ್ಯೆ ಇಳಿಮುಖವಾಯಿತು ಎಂದರೆ ನಿಜ.

ನಿಪಿ8 ರ ಖಂಡಿಕೆ 9 ರ ಪ್ರಕಾರ ಯಾರಾದರೂ ಪಕ್ಷಗಾರರು 30 ದಿನಗಳ ನೋಟಿಸನ್ನು ನೀಡಿ ನಿಪಿ8 ನ್ನು ರದ್ದುಪಡಿಸಿಕೊಳ್ಳಬಹುದೆಂದು ಬರೆದಿದೆ ಎಂದರೆ ನಿಜ.

ನಿಪಿ5 ರ ಪ್ರಕಾರ ದಿನಾಂಕ 28.3.2021 ರಂದು ವಾದಿಯರು ವಕೀಲರ ಮೂಲಕ ನೋಟಿಸನ್ನು ನೀಡಿದ್ದು ನಮಗೆ ಜಾರಿಯಾಗಿದೆ ಎಂದರೆ ಸರಿಯಲ್ಲ. ನಿಪಿ5 ರಲ್ಲಿರುವ ವಿಳಾಸ ಪ್ರತಿವಾದಿ ಸಂಸ್ಥೆಯ ವಿಳಾಸ, ನನ್ನ ವಿಳಾಸವಿರುವುದಿಲ್ಲ. ಪ್ರತಿವಾದಿ ಸಂಸ್ಥೆಯು ಆಸ್ಪತ್ರೆಯಾಗಿದ್ದರಿಂದ ಪ್ರತಿದಿನ 24 ಗಂಟೆಯೂ ಕಾವಲುಗಾರ ಇರುತ್ತಾರೆ ಎಂದರೆ ಆಸ್ಪತ್ರೆಯು ನಮ್ಮ ಸುಪರ್ದಿಯಲ್ಲಿರಲಿಲ್ಲ, ವಕ್ಫಬೋರ್ಡ್ ಅಧಿಕಾರದಲ್ಲಿತ್ತು. ಪ್ರತಿವಾದಿ ಸಂಸ್ಥೆಯು ವಕ್ಫಬೋರ್ಡ್ ಸುಪರ್ದಿಯಲ್ಲಿತ್ತು ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯನ್ನು ಹಾಜರುಪಡಿಸದಿದ್ದಲ್ಲಿ, ಹಾಜರುಪಡಿಸಲು ತೊಂದರೆ ಇಲ್ಲ.

ನಿಪಿ5 ಪ್ರತಿವಾದಿ ಸಂಸ್ಥೆಯ ಅಧಿಕೃತ ವಿಳಾಸಕ್ಕೆ ಬಂದಿದ್ದರೂ, ನಾವು ಉದ್ದೇಶಪೂರ್ವಕವಾಗಿ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಮಗೆ ನಿಪಿ5 ರಲ್ಲಿ ಬರೆದಿರುವ ವಿಷಯಗಳು ಗೊತ್ತಿದ್ದರಿಂದ ಉದ್ದೇಶಪೂರ್ವಕವಾಗಿ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ8 ಖಂಡಿಕೆ 4 ರ ಪ್ರಕಾರ ವಾದಿ ಮತ್ತು ಪ್ರತಿವಾದಿ ಸಂಸ್ಥೆಗಳು ಬಂದ ಆದಾಯವನ್ನು ಸಮನಾಗಿ ಹಂಚಿಕೊಳ್ಳಬೇಕೆಂದು ಇರುತ್ತದೆ ಎಂದರೆ ನಿಜ.

ನಿಪಿ2 ರ ಪ್ರಕಾರ ದಿನಾಂಕ 30.11.2020 ರಂದು ವಾದಿಯು ನಿಪಿ8 ನ್ನು ಟರ್ಮಿನೇಟ್ ಮಾಡುತ್ತಿದ್ದೇನೆ ಎಂದು ನೋಟಿಸ್ ನೀಡಿದ್ದು ಅದು ನಮಗೆ ಜಾರಿಯಾಗಿದೆ ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ನಿಪಿ2 ರಲ್ಲಿರುವ ಸಹಿಗಳು ನನ್ನವು ಎಂದರೆ ಸರಿಯಲ್ಲ. ಆದರೆ ನಿಪಿ2 ರಲ್ಲಿ ಡಾಕ್ಟರ್ ಕೆ.ರವೀಂದ್ರನಾಥ್ ರವರ ಸಹಿಗಳು ಇರುತ್ತವೆ. ಡಾಕ್ಟರ್ ಕೆ.ರವೀಂದ್ರನಾಥ್ ರವರು ಪ್ರತಿವಾದಿಯ ಸಂಸ್ಥೆಯ ಟ್ರಸ್ಟಿಗಳಲ್ಲಿ ಒಬ್ಬರು ಇರುತ್ತಾರೆ. ನಿಪಿ2 ರ ಹಿಂದಿನ ಪುಟದ ಬಲಭಾಗದಲ್ಲಿ ನಂಬರ್ 2 ಎಂದು ಬರೆದ ಸಹಿ ನನ್ನದು ಇರುತ್ತದೆ. ಸಾಕ್ಷಿ ಮುಂದುವರಿದು ಕೋವಿಡ್–19 ಅವಧಿಯಲ್ಲಿ ನಾನು ಆಸ್ಪತ್ರೆಗೆ ದಾಖಲಾಗಿದ್ದೆ, ದಾಖಲೆಗೆ ಸಹಿ ಬೇಕೆಂದು ಹೇಳಿ ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿ ಒಪ್ಪಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ2(ಎ) ಎಂದು ಗುರುತಿಸಿದೆ. ಸದರಿ ಸಮಯದಲ್ಲಿ ನಾನು ಬೆಂಗಳೂರಿನ ಅಪೋಲೋ ಆಸ್ಪತ್ರೆಯಲ್ಲಿ ಕೋವಿಡ್–19 ಗೆ ಚಿಕಿತ್ಸೆ ಪಡೆಯುತ್ತಿದ್ದೆನು. ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಚಿಕಿತ್ಸೆ ಪಡೆದಿರುತ್ತೇನೆ ಎಂದು ನೆನಪಿಲ್ಲ, ಆದರೆ ದಾಖಲೆ ನೀಡಿರುತ್ತೇನೆ. ಸಾಕ್ಷಿ ಮುಂದುವರಿದು ನಿಡಿ1 ನ್ನು ಪರಿಶೀಲಿಸಿ ದಿನಾಂಕ 23.10.2020 ರಿಂದ 4.11.2020 ರವರೆಗೆ ಚಿಕಿತ್ಸೆ ಪಡೆದಿರುತ್ತೇನೆ ಎಂದು ಹೇಳುತ್ತಾರೆ. ದಿನಾಂಕ 4.11.2020 ರಿಂದ ಒಂದು ತಿಂಗಳ ಕಾಲ ನಾನು ಪ್ರತಿವಾದಿ ಸಂಸ್ಥೆಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ದಿನಾಂಕ 4.11.2020 ರಿಂದ ಒಂದು ತಿಂಗಳ ಕಾಲ ಪಡೆದ ಚಿಕಿತ್ಸೆ ದಾಖಲೆ ಇರುತ್ತದೆ, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಹಾಜರುಪಡಿಸದಿದ್ದಲ್ಲಿ ಹಾಜರುಪಡಿಸಲು ತೊಂದರೆ ಇಲ್ಲ. ಪ್ರತಿವಾದಿ ಸಂಸ್ಥೆಯ ಆಸ್ಪತ್ರೆಯಲ್ಲಿ ಒಂದು ತಿಂಗಳ ಕಾಲ ಚಿಕಿತ್ಸೆ ಪಡೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 3.12.2020 ರಂದು ನಿಪಿ2 ನ್ನು ಪಡೆದಿದ್ದೇನೆ ಎಂದರೆ ಸರಿಯಲ್ಲ. ನಿಪಿ2(ಎ)ನ್ನು ದಿನಾಂಕ 3.12.2020 ರಂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 3.11.2020 ರಂದು ಮಾಡಿರುತ್ತೇನೆ. received on 3.12.2020 ಎಂದು ನಿಪಿ2 ರಲ್ಲಿ ಬರೆದ ಬರವಣಿಗೆ ನನ್ನದಿರುತ್ತದೆ, ಸಾಕ್ಷಿ ಮುಂದುವರಿದು ಬರವಣಿಗೆ ನನ್ನದಲ್ಲ ನಾನು ದಿನಾಂಕ '3/11/2020' ಎಂದು ಬರೆದು ಸಹಿ ಮಾಡಿದ್ದೇನೆ. ಸದರಿ ದಿನಾಂಕದಲ್ಲಿ ಬರೆದ '11' ರಲ್ಲಿ ಮೊದಲ 1 ಮತ್ತು ಎರಡನೇ 1 ಬೇರೆ ಬೇರೆ ಇರುತ್ತದೆ ಎಂದರೆ ಸರಿಯಲ್ಲ. ಎರಡನೇ 1 ನ್ನು ಗೆರೆ ಹಾಕಿ ಜೊತೆಗೆ 2 ಎಂದು ಬರೆದಿದ್ದೇನೆ ಎಂದರೆ ಸರಿಯಲ್ಲ. ನಿಪಿ2 ದಿನಾಂಕ 30.11.2020 ರ ದಾಖಲೆ ಸದರಿ ದಾಖಲೆಗೆ ದಿನಾಂಕ 3.11.2020 ರಂದು ಸಹಿ ಮಾಡುವ ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ.

ಡಾಃ ಕೆ.ರವೀಂದ್ರನಾಥ್ ಪ್ರತಿವಾದಿ ಸಂಸ್ಥೆಯ ಟ್ರಸ್ಟಿಗಳಲ್ಲಿ ಒಬ್ಬರಿದ್ದು ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಬರುವುದಕ್ಕೆ ತೊಂದರೆ ಇಲ್ಲ. ನಿಪಿ2 ನಮ್ಮ ಗಮನಕ್ಕೆ ಬಂದಿದ್ದರೂ ನ್ಯಾಯಾಲಯದ ಗಮನ ಬೇರೆಡೆ ಸೆಳೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ2 ರಂತೆ ವಾದಿಯು ದಾವಆಸ್ತಿಯನ್ನು ನಿಪಿ8 ರಂತೆ ಅವಧಿ ಮುಗಿದ ನಂತರ ಖಾಲಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು ಈಗ ದಾವಆಸ್ತಿಯ ಸ್ವಾಧೀನದಲ್ಲಿ ಇರುವುದಿಲ್ಲ. ವಕ್ಫಬೋರ್ಡ್ ಸ್ವಾಧೀನದಲ್ಲಿರುತ್ತದೆ. ವಾದಿಯು ದಾವಆಸ್ತಿಯ ಸ್ವಾಧೀನವನ್ನು ಯಾವ ದಿನಾಂಕದಂದು ಬಿಟ್ಟುಕೊಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಸಾಕ್ಷಿಯು ನಿಡಿ2 ನ್ನು ನೋಡಿ ದಿನಾಂಕ 17.12.2021 ರಂದು ಸ್ವಾಧೀನ ಬಿಟ್ಟುಕೊಟ್ಟಿರುತ್ತಾರೆ ಎನ್ನುವರು. ನಿಡಿ2 ಡಾಃ ಕೆ.ರವೀಂದ್ರನಾಥ್ ಪ್ರತಿವಾದಿ ಸಂಸ್ಥೆಯ ಟ್ರಸ್ಟಿ ಕಡೆಯಿಂದ ವಕ್ಫಬೋರ್ಡ್ ನವರು ದಾವಆಸ್ತಿಯನ್ನು ದಿನಾಂಕ 17.12.2021

ರಂದು ಮಹಜರ್ ಮಾಡಿ ಸ್ವಾಧೀನಪಡಿಸಿಕೊಂಡಿರುವ ದಾಖಲೆ ಇರುತ್ತದೆ. ನಿಡಿ2 ಕ್ಕೆ ವಾದಿ ಸಂಸ್ಥೆ ಪಕ್ಷಕಾರ ಇರುವುದಿಲ್ಲ.

ನಿಪಿ2 ರ ಪ್ರಕಾರ ವಾದಿ ಸಂಸ್ಥೆಯು ದಾವಆಸ್ತಿಯನ್ನು ಪ್ರತಿವಾದಿ ಸಂಸ್ಥೆಗೆ ದಿನಾಂಕ 30.11.2020 ರಂದು ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಿಪಿ2 ರ ಖಂಡಿಕೆ4 ರ ಪ್ರಕಾರ ಪ್ರತಿವಾದಿ ಸಂಸ್ಥೆಯು ವಾದಿ ಸಂಸ್ಥೆಗೆ 37,86,332/- ರೂ. ಲಾಭಾಂಶ ಕೊಡಬೇಕಾಗಿದೆ ಎಂದರೆ ಸುಳ್ಳು. ಸದರಿ ಹಣ ಮತ್ತು ರಿಫಂಡೆಬಲ್ ಸೆಕ್ಯೂರಿಟಿ ಹಣ 20 ಲಕ್ಷ ಸೇರಿ ಒಟ್ಟು 57,86,332/- ರೂ. ದಾವ ದಿನಾಂಕದಂದು ಬಾಕಿ ಇರುತ್ತದೆ ಎಂದರೆ ಸುಳ್ಳು.

ವಾದಿ ಸಂಸ್ಥೆಗೆ ಪ್ರತಿವಾದಿ ಸಂಸ್ಥೆ ಯಾವುದೇ ಲಾಭಾಂಶ ನೀಡಿಲ್ಲ ಎಂದರೆ ಸರಿಯಲ್ಲ. ಎಷ್ಟು ಲಾಭಾಂಶವನ್ನು ಯಾವ ದಿನಾಂಕ ವಾದಿ ಸಂಸ್ಥೆಗೆ ನೀಡಿರುತ್ತೇವೆ ಎಂದು ದಾಖಲೆ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

ಪ್ರತಿವಾದ ಪತ್ರದ ಖಂಡಿಕೆ 14 ರಲ್ಲಿ ಹೇಳಿದಂತೆ ವಾದಿ ಸಂಸ್ಥೆಯು ಪ್ರತಿವಾದಿ ಸಂಸ್ಥೆಗೆ 86,72,271/- ರೂ. ಹಣವನ್ನು ಹಾನಿ ಮಾಡಿರುತ್ತಾರೆ ಎಂದು ನಾವು ವಾದಿ ಸಂಸ್ಥೆಯ ವಿರುದ್ಧ ಕಾನೂನು ಕ್ರಮ ಕೈಗೊಂಡಿರುವುದು ಗೊತ್ತಿಲ್ಲ. ಪ್ರತಿವಾದ ಪತ್ರದ ಖಂಡಿಕೆ 18 ರಲ್ಲಿ ಹೇಳಿದಂತೆ ವಾದಿ ಸಂಸ್ಥೆಯು ಪ್ರತಿವಾದಿ ಸಂಸ್ಥೆಗೆ ರೂ.1,62,23,080/- ಗಳ ಉಪಕರಣಗಳನ್ನು ಕಾನೂನುಬಾಹಿರವಾಗಿ ತೆಗೆದುಕೊಂಡು ಹೋಗಿರುತ್ತಾರೆ ಎಂದು ನಾವು ವಾದಿ ಸಂಸ್ಥೆಯ ವಿರುದ್ಧ ಕಾನೂನು ಕ್ರಮ ಕೈಗೊಂಡಿರುವುದು ಗೊತ್ತಿಲ್ಲ, ದಾಖಲೆಗಳು ಆಸ್ಪತ್ರೆಯಲ್ಲಿರುತ್ತವೆ.

ವಾದಿ ಸಂಸ್ಥೆಯು ಆಸ್ತಿಯನ್ನು ಖಾಲಿ ಮಾಡುವ ಸಮಯದಲ್ಲಿ ಚೆಕ್ ಲಿಸ್ಟನ್ನು ತಯಾರಿಸಿ ಚಾರ್ಜನ್ನು ಪ್ರತಿವಾದಿ ಸಂಸ್ಥೆ ಪಡೆದಿರುತ್ತಾರೆ ಎಂದರೆ ನಿಜ. ವಾದಿ ಸಂಸ್ಥೆಗೆ ಹಾನಿ ಮಾಡಬೇಕೆಂಬ ಉದ್ದೇಶದಿಂದ ವಾದಿ ಸಂಸ್ಥೆಯಿಂದ ಪಡೆದ ಹಣವನ್ನು ಇಲ್ಲಿಯವರೆಗೂ ನೀಡಿಲ್ಲ ಎಂದರೆ ಸರಿಯಲ್ಲ. ಚೆಕ್‌ಲಿಸ್ಟ ಮತ್ತು ಚಾರ್ಜ ತೆಗೆದುಕೊಂಡ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ಹಾಜರುಪಡಿಸದಿದ್ದಲ್ಲಿ ಅವುಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ.

ನಾನು ಆಸ್ಪತ್ರೆಯಲ್ಲಿದ್ದರಿಂದ ಪ್ರತಿವಾದಿ ಸಂಸ್ಥೆ ಮತ್ತು ವಾದಿ ಸಂಸ್ಥೆಯ ನಡುವೆ ಆಗಿರುವ ಸಂಪೂರ್ಣ ವ್ಯವಹಾರದ ಮಾಹಿತಿ ಇರುವುದಿಲ್ಲ ಎಂದರೆ ನಿಜ. ನಾನು ದುರ್ಲಾಭ ಮಾಡಿಕೊಳ್ಳಬೇಕೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಹಾಜರುಪಡಿಸಿದ ದಾಖಲೆಗಳು ಸೃಷ್ಟಿತ ದಾಖಲೆಗಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು